ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

N0. 1, Unnatha Shikshana Soudha, Sheshadri Road, Bangalore - 560 001 Phone: 080 22343904, email: dce.commissioner@gmail.com

ಸಂಖ್ಯೆ: ಕಾಶಿಇ/ಮಾತಂವಿ/ಪಿಯುಆರ್/13/ಇನ್ನೋ/2020 ದಿನಾಂಕ: 28/06/2021

# ಸುತ್ತೋಲೆ-5

**ವಿಷಯ:** 2020-21ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಥಮ ಪದವಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿ.ಸಿ. ವಿತರಿಸುವ ಬಗ್ಗೆ.

**ಉಲ್ಲೇಖ:** ಇಲಾಖೆಯ ಸುತ್ತೋಲೆ-4 ಸಂಖ್ಯೆ: ಕಾಶಿಇ/ಮಾತಂವಿ/ಪಿಯುಆರ್/13/ಇನ್ನೋ/2020 ದಿನಾಂಕ: 21/06/21

*****

2020-21ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಥಮ ಪದವಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿ.ಸಿ ವಿತರಣಾ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಿ, ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕೆಳಕಂಡ ಅಂಶಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸತಕ್ಕದ್ದು:

1. ಪ್ರಮಾಣ ಪತ್ರ ಹಾಗೂ ರಸೀದಿ ನಮೂನೆಗಳನ್ನು ವಿದ್ಯಾರ್ಥಿಗಳಿಂದ ಭರ್ತಿ ಮಾಡಿಸಿ ಕಾಲೇಜಿನಲ್ಲಿ ಸಂರಕ್ಷಿಸಿಟ್ಟುಕೊಳ್ಳತಕ್ಕದ್ದು.

2. ಒಂದು ರೆಜಿಸ್ಟರ್ ನಲ್ಲಿ ಫಲಾನುಭವಿ ವಿದ್ಯಾರ್ಥಿಗಳ ಹೆಸರು, ವಿಶ್ವವಿದ್ಯಾಲಯ ನೋಂದಣಿ ಸಂಖ್ಯೆ, ಅವರು ಸ್ವೀಕರಿಸಿರುವ ಟ್ಯಾಬ್ಲೆಟ್ ಪಿ.ಸಿ.ಯ ಕ್ರಮಸಂಖ್ಯೆಗಳನ್ನು ನಮೂದಿಸಿ ಅವರಿಂದ ಸಹಿ ಪಡೆಯತಕ್ಕದ್ದು.

3. ಇ.ಎಂ.ಐ.ಎಸ್ ನ ಅಡ್ಮಿಶನ್ ಪೋರ್ಟಲ್ ನಲ್ಲಿ Data Entry Menu ಅಡಿ ಲಭ್ಯವಿರುವ 'Update Tablet Serial Number' ಫಾರ್ಮ್‌ನಲ್ಲಿ ಟ್ಯಾಬ್ಲೆಟ್ ಪಿ.ಸಿ ಪಡೆದಿರುವ ಪ್ರತಿ ವಿದ್ಯಾರ್ಥಿಯ ಹೆಸರಿನ ಮುಂದೆ ಅವರಿಗೆ ವಿತರಿಸಲಾಗಿರುವ ಟ್ಯಾಬ್ಲೆಟ್ ಪಿ.ಸಿ ಕ್ರಮ ಸಂಖ್ಯೆಯನ್ನು ನಮೂದಿಸಿ 'Submit' ಮಾಡತಕ್ಕದ್ದು.

ಎಲ್ಲ ಕಾಲೇಜುಗಳೂ ಮೇಲೆ ಸೂಚಿಸಿದ ಕ್ರಮಗಳನ್ನು ತಪ್ಪದೆ ಪಾಲಿಸತಕ್ಕದ್ದು.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. ಪ್ರಾಂಶುಪಾಲರು, ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲ್ಬರ್ಗಾ, ಕಾಲೇಜು ಶಿಕ್ಷಣ
3. ಕಛೇರಿ ಪ್ರತಿ